**ಓ.ಎಸ್ ನಂಃ *290* /2017**

**ಪಿ.ಡಬ್ಲು-*3***

ಸಾಕ್ಷಿಯನ್ನು ದಿನಾಂಕಃ 22.09.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಕೆ ವಿ ಎಸ್ ವಕೀಲರಿಂದ**

ವೆಂಕಟೇಶರೆಡ್ಡಿ ರವರಿಗೆ ನನ್ನ ಅಜ್ಜಿ ಮತ್ತು ನನ್ನ ತಾತ ಸರ್ವೆ ನಂ 20 ರಲ್ಲಿ 3 ಎಕರೆ 2 ಗುಂಟೆಗೆ ಸಂಬಂದಿಸಿದಂತೆ 3 ಕ್ರಯ ಪತ್ರಗಳನ್ನು ದಿನಾಂಕ24.05.1976 ರಲ್ಲಿ 1 ಎಕರೆ , ದಿನಾಂಕ 13.04.1977 ರಲ್ಲಿ 1 ಎಕರೆ ಹಾಗೂ ದಿನಾಂಕ 11.08.1977 ರಲ್ಲಿ 2 ಎಕರೆ 7 ಗುಂಟೆ ಸಂಬಂದಿಸಿದಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನಾಂಕದಿಂದ ನನ್ನ ಅಜ್ಜಿ ಹಾಗೂ ತಾತ ಮೇಲೆ ಹೇಳಿದ ಸ್ವತ್ತುಗಳಲ್ಲಿ ಹಕ್ಕನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಗಳ ಅಧಾರದ ಮೇಲೆ ಖಾತೆ ಹಾಗೂ ಪಹಣಿ ವೆಂಕಟೇಶರೆಡ್ಡಿ ರವರ ಹಸರಿಗೆ ಬದಲಾಗಿರುತ್ತದೆ ಎಂದರೆ ಸರಿಯಲ್ಲ. ಓ ಎಸ್ ನಂ 77/1980 ನ್ನು ವೆಂಕಟೇಶರೆಡ್ಡಿ ರವರು ನನ್ನ ತಾತ ಮತ್ತು ಅಜ್ಜಿಯ ವಿರುದ್ದ ಸ್ವತ್ತುಗಳಿಗೆ ತೊಂದರೆ ಕೊಡುತ್ತಿದ್ದ ಕಾರಣ ದಾವಾ ಹೂಡಿದ್ದರು ಎಂದರೆ ಸರಿಯಲ್ಲ. ಸದರಿ ಓ ಎಸ್ 77/1980 ರಲ್ಲಿ ನನ್ನ ಅಜ್ಜಿ ಹಾಗೂ ನನ್ನ ತಾತ ಮತ್ತು ವೆಂಕಟೇಶರೆಡ್ಡಿ ಹಾಗೂಾ ಪಿ ನಾರಾಯರೆಡ್ಡಿ ರವರು 1 ಎಕರೆ ಸ್ವತ್ತಿಗೆ ಸಂಬಂದಿಸಿದಂತೆ ರಾಜೀ ಸಂದಾನ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಅಂದರೆ ವಾದಿ , ಪ್ರತಿವಾದಿಗಳ ವಿರುದ್ದ ಅಸಲು ದಾವಾ ಸಂ 61/1982 ರಲ್ಲಿ ವಿಭಾಗಕ್ಕಾಗಿ ದಾವಾ ಹೂಡಿದ್ದರು ಎಂದರೆ ಹಾಕಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನ ತಾಯಿ ಎಲ್ಲಾ ಪ್ರತಿವಾದಿಗಳ ತಂದೆಗೆ 1 ಎಕರೆ ಸ್ವತ್ತು ಇರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆ ಸ್ವತ್ತನ್ನು ಪಿ ನಾರಾಯಣರೆಡ್ಡಿ ರವರು ಕ್ರಯಕ್ಕೆ ಪಡೆದಿದ್ದರಿಂದ ಸದರಿ ಸ್ವತ್ತನ್ನು ರಾಜೀ ಸಂದಾನದಲ್ಲಿ ಅವರಿಗೆ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜೀ ಸಂದಾನದಲ್ಲಿ 4 ಎಕರೆ 14 ಗುಂಟೆ ಸ್ವತ್ತಿಗೆ ರಾಜೀ ಅಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 3 ಎಕರೆ 7 ಗುಂಟೆಗೆ ಮಾತ್ರ ರಾಜೀ ಸಂದಾನ ಅಗಿರುತ್ತದೆ ಹಾಗೂ 1 ಎಕರೆಯನ್ನು ನಾವೇ ಬಿಟ್ಟುಕೊಂಡಿದ್ದೇವು ಎಂದು ನುಡಿಯುತ್ತಾರೆ. ಸದರಿ ರಾಜೀ ಸಂದಾನದಲ್ಲಿ ನಾವು ಬಿಟ್ಟುಕೊಂಡಿದ್ದ 1 ಎಕರೆ ಯ ಸ್ವತ್ತಿನ ಮಾಲೀಕತ್ವವನ್ನು ಬಿಟ್ಟುಕೊಡುತ್ತಿದ್ದೇವೆಂದು ಬರೆದಿರುತ್ತದೆ ಎಂದರೆ ಸರಿಯಲ್ಲ. ಸದರಿ ರಾಜೀ ಅದಾಗಿನಿಂದ ಸರ್ವೆ ನಂ 20 ರಲ್ಲಿ 1 ಎಕರೆ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ 1 ಎಕರೆ ಸ್ವತ್ತಿಗೆ ನಾವು ತೊಂದರೆ ಕೊಟ್ಟ ಕಾರಣ ಪ್ರತಿವಾದಿಗಳು ಪೋಲಿಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಊರಿನಲ್ಲಿ ಇರದೇ ಇರುವ ಸಮಯದಲ್ಲಿ ನನ್ನ ತಾಯಿ ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ

ಸರ್ವೆ ನಂ 20 ರಲ್ಲಿ 3 ಎಕರೆ ಸ್ವತ್ತಿಗೆ ಸಂಬಂದಿಸಿದಂತೆ ನನ್ನ ತಾಯಿ ಮತ್ತು ನನ್ನ ಕುಟುಂಬದವರು ಮುನಿರತ್ನಂ ನಾಯ್ಡು ರವರಿಗೆ ಜಿ ಪಿ ಎ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಿ ಪಿ ಎ ಮುಖೇನ ಮುನಿರತ್ನಂ ನಾಯ್ಡು ರವರು ಪ್ರತಿವಾದಿಯರಿಗೆ ಸೇರಿದ 1 ಎಕರೆ ಸ್ವತ್ತಿಗೆ ತೊಂದರೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದ್ದರಿಂದ ಪ್ರತಿವಾದಿಗಳ ತಂದೆ ತಾಯಿ ಸದರಿ ಮುನಿರತ್ನಂ ನಾಯ್ಡು ರವರ ವಿರುದ್ದ ಅಸಲು ದಾವಾ ಸಂ, 22/1996 ರಲ್ಲಿ ದಾವಾ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾವು ಅಕ್ರಮವಾಗಿ ಕಟ್ಟಿರುವ 13 ಅಂಗಡಿಗಳನ್ನು ನೆಲಸಮ ಮಾಡಬೇಕೆಂದು ಅದೇಶವಾಗಿರುತ್ತದೆ ಎಂದರೆ ಸರಿಯಲ್ಲ ಸದರಿ ಅದೇಶದ ವಿರುದ್ದ ಮುನಿರತ್ನಂ ನಾಯ್ಡು ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ ಎಸ್ ಎ ನಂ 754/2009 ನ್ನು ಹೂಡಿದ್ದು ವಜಾ ಅಗಿರುತ್ತದೆ ಎಂದರೆ ಸರಿಯಲ್ಲ. ಇ ಎಕ್ಸ್ ನಂ 16/2011 ರಲ್ಲಿ ನ್ಯಾಯಾಲಯದಿಂದ ಪ್ರತಿವಾದಿಗಳು 1 ಎಕರೆ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಿಂದ ನಮಗಾಗಲೀ ಅಥವಾ ಮುನಿರತ್ನಂ ನಾಯ್ಡು ರವರಿಗಾಗಲೀ ಸದರಿ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂ 267/2023 ರಲ್ಲಿ ನನ್ನ ತಾಯಿಯು ಪ್ರತಿವಾದಿಯರ ವಿರುದ್ದ ಮತ್ತೊಂದು ದಾವಾವನ್ನು ಹೂಡಿರುತ್ತಾರೆ ಎಂದರೆ ಸರಿ. ಸರ್ವೆ ನಂ 20 ರ 4 ಎಕರೆ 14 ಗುಂಟೆ ಸ್ವತ್ತಿನಲ್ಲಿ ಪ್ರತಿವಾದಿಯರ ತಂದಗೆ ಸೇರಿದ 1 ಎಕರೆ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 1 ಎಕರೆ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆಗೆ ತೊಂದರೆ ಕೊಡುವ ಉದ್ದೇಶದಿಂದ ತಪ್ಪು ಚೆಕ್ಕುಬಂದಿಗಳನ್ನು ನೀಡಿ ಸುಳ್ಳು ದಾವಾ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಮಂಜು ಎಂ)**

**2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್**